## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ ರವರ ನ್ಯಾಯಾಲಯ, ಕೊಳ್ಳೇಗಾಲ

ಸಿ.ಸಿ ನಂ. 798 /2018

| | | | |
|---|---|---|---|
| ಸಾಕ್ಷಿಯ ಹೆಸರು | : ಲೋಹಿತ್ ಕೆ.ವಿ | | |
| ತಂದೆಯ ಹೆಸರು | : ವೆಂಕಟಚಲ ಗೌಡ | | |
| ವಯಸ್ಸು | : 40 ವರ್ಷ | | |
| ಉದ್ಯೋಗ | : ಅಬಕಾರಿ ನಿರೀಕ್ಷಕರು | | ಚಾಸಾ : 1 |
| ವಾಸ ಸ್ಥಳ | : ಬಸವನಗುಡಿ, ಬೆಂಗಳೂರು | | ಫ್ರಾಸಾ : 1 |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾದ ದಿನಾಂಕ : 09.12.2022.

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ನಾನು ದಿನಾಂಕ 06.04.2018 ರಿಂದ 22..11.2018 ರವರೆಗೆ ಕೊಳ್ಳೇಗಾಲ ವಲಯದಲ್ಲಿ ಅಬಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 15.05.2018 ರಂದು ವಿಧಾನ ಸಭಾ ಸಾರ್ವತ್ರಿಕ ಚುನಾವಣೆ ಹಿನ್ನೆಲೆಯಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ಚಾಮರಾಜನಗರ ಜಿಲ್ಲೆ ಇವರ ಆದೇಶದಂತೆ ಮತ ಎಣಿಕೆಯ ನಿಮಿತ್ತ ದಿನಾಂಕ 14.05.2018 ರ ಮಧ್ಯ ರಾತ್ರಿಯಿಂದ ದಿನಾಂಕ 15.05.2018 ರ ಮಧ್ಯ ರಾತ್ರಿಯವರೆಗೆ ಚಾಮರಾಜನಗರ ಜಿಲ್ಲಾದ್ಯಂತ ಮದ್ಯ ಮಾರಾಟ ಸಾಗಾಣಿಕೆ ಮತ್ತು ಶೇಖರಣೆ ಹಾಗೂ ಹಂಚಿಕೆಯನ್ನು ನಿಷೇಧಿಸಿ ಒಣ ದಿನ ಎಂದು ಘೋಷಿಸಿ ಆದೇಶಿಸಿದ್ದ ಹಿನ್ನೆಲೆಯಲ್ಲಿ ಮದ್ಯ ಮಾರಾಟ ಮತ್ತು ಇತರೆ ಯಾವುದೇ ಇರಹದ ಮದ್ಯ ವಹಿವಾಟು ನಿಷೇದಿಸಿದ್ದು, ಮಾನ್ಯ ಅಬಕಾರಿ ಉಪ ಆಯುಕ್ತರು, ಚಾಮರಾಜನಗರ ಜಿಲ್ಲೆ ಹಾಗೂ ಅಬಕಾರಿ ಉಪ ಅಧೀಕ್ಷಕರು, ಚಾಮರಾಜನಗರ ಉಪ ವಿಭಾಗ ಇವರುಗಳ ನಿರ್ದೇಶನದ ಮೇರೆಗೆ ಸಿಬ್ಬಂದಿಗಳೊಂದಿಗೆ ದಿನಾಂಕ 15.05.2018 ರಂದು ಕೊಳ್ಳೇಗಾಲ ವಲಯ ವ್ಯಾಪ್ತಿಯಲ್ಲಿ ಗಸ್ತು ನಡೆಸುತ್ತಿದ್ದಾಗ ದೊರೆತ ಮಾಹಿತಿ ಮೇರೆಗೆ ಕೊಳ್ಳೇಗಾಲ ತಾಃ, ರಾಮಾಪುರ ಹೋಬಳಿ, ನಾಲಾರೋಡ್ –ಹೂಗ್ಯಂ ಗ್ರಾಮದ ಮೀಣ್ಯತ್ತು ಹಳ್ಳಕ್ಕೆ ನಿರ್ಮಿಸಿರುವ ಸೇತುವೆ ಹತ್ತಿರ ಒಬ್ಬ ಆಸಾಮಿಯು ಸಿಲ್ವರ್ ಬಣ್ಣದ ಮಾರುತಿ ಓಮ್ನಿ ಕಾರ್ ನಲ್ಲಿ ಹಠಾತ್ತನೆ ಎದುರುಗೊಂಡ ಇಲಾಖಾ ವಾಹನ ಹಾಗೂ ಸಮವಸ್ತ್ರ ದಲ್ಲಿದ್ದ ನಮ್ಮಗಳನ್ನು ಕಂಡು ಗಾಬರಿಗೊಂಡು ವಾಹನ ಬಿಟ್ಟು ಓಡಿಹೋಗಲು ಪ್ರಯಸಿತ್ತಿದನು.

ಆತನನ್ನು ನಮ್ಮ ಸಿಬ್ಬಂದಿಗಳು ತಡೆದು ನಿಲ್ಲಿಸಿ ಸದರಿ ಸ್ಥಳದಲ್ಲಿಯೇ ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 54 ರ ರೀತ್ಯಾ ಪದತ್ತವಾದ ಅವಕಾಶವನ್ನು ಉಪಯೋಗಿಸಿಕೊಂಡು ಶೋಧನಾ ಸಮುಚ್ಚಿತ ಆಧಾರ ತಯಾರಿಕೊಂಡು ಸದರಿ ಆಸಾಮಿಯ ಸಹಿಯನ್ನು ಪಡೆದು ವಾಹನವನ್ನು ಪರಿಶೀಲಿಸಲಾಗಿ ಅದು ಸಿಲ್ವರ್ ಬಣ್ಣದ ಮಾರುತಿ ಓಮ್ನಿ ಕಾರಾಗಿದ್ದು, ಅದರ ನೋಂದಣಿ ಸಂಖ್ಯೆಕೆಎ–05–ಎಂಯು –285 ಆಗಿರುತ್ತದೆ. ಅದರ ಒಳಗಡೆ

ಮದ್ಯದ ರಟ್ಟಿನ ಪೆಟ್ಟಿಗೆಗಳು ಇರುವುದು ಕಂಡು ಬಂದಿದ್ದು, ಸದರಿ ಆಸಾಮಿಯ ಸಮಕ್ಷಮ ವಾಹನವನ್ನು ಪರಿಶೀಲಿಸಲಾಗಿ ಅವುಗನ್ನು 1 ನೇ ರಟ್ಟಿನ ಬಾಕ್ಸ್ ನಲ್ಲಿ 180 ಎಂ ಎಲ್ ನ 48 ಟೆಟ್ರಾ ಪ್ಯಾಕುಗಳ್ಳು ಒರಿಜಿನಲ್ಲಿ ಚಾಯ್ಸ್ ಬ್ರಾಂದಿಯ ಒಟ್ಟು 8 ಮದ್ಯದ ರಟ್ಟಿನ ಪೆಟ್ಟಿಗೆಗಳು, 2 ನೇ ರಟ್ಟಿನ ಬಾಕ್ಸ್ ನಲ್ಲಿ 180 ಎಂ ಎಲ್ ನ 48 ಟೆಟ್ರಾ ಪ್ಯಾಕುಗಳ್ಳು ತ್ರಿ ಏಸಸ್ ವಿಸ್ಕಿ ಬ್ರಾಂದಿಯ ಒಟ್ಟು 8 ಮದ್ಯದ ರಟ್ಟಿನ ಪೆಟ್ಟಿಗೆಗಳು, 3 ನೇ ರಟ್ಟಿನ ಬಾಕ್ಸ್ ನಲ್ಲಿ 180 ಎಂ ಎಲ್ ನ 48 ಟೆಟ್ರಾ ಪ್ಯಾಕುಗಳುಳ್ಳ ಓಲ್ಡ್ ಟವರಿನ್ ವಿಸ್ಕಿಯ ಒಟ್ಟು 2 ಮದ್ಯದ ರಟ್ಟಿನ ಪೆಟ್ಟಿಗೆಗಳು, 4 ನೇ ರಟ್ಟಿನ ಬಾಕ್ಸ್ ನಲ್ಲಿ 500 ಎಂ ಎಲ್ ನ 24 ಟಿನ್ನುಗಳು ಕೆ ಎಫ್ ಸ್ಟ್ರಾಂಗ್ ಪ್ರೀಮಿಯಂ ಬಿಯರ್ ನ ಒಟ್ಟು 4 ರಟ್ಟಿನ ಪೆಟ್ಟಿಗೆಗಳು ಇರುವುದು ಕಂಡು ಬಂದಿದ್ದು, ಒಟ್ಟು 155.520 ಲೀ. ಸಾಮರ್ಥ್ಯದ ಮದ್ಯ ಹಾಗೂ 48 ಲೀ. ಬಿಯರ್ ಇರುತ್ತದೆ.

ಕರ್ನಾಟಕ ರಾಜ್ಯ ವಿಧಾನ ಸಾಭಾ ಸಾರ್ವತ್ರಿಕ ಚುನಾವಣೆ 2018 ರ ಮತ ಎಣಿಕೆಯ ನಿಮಿತ್ತ ಈ ದಿನ ಮಧ್ಯ ರಾತ್ರಿ 12.00 ಗಂಟೆಯವರೆಗೆ ಮಾನ್ಯ ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ ಇವರು ಜಿಲ್ಲಾದ್ಯಂತ ಮದ್ಯ ಮಾರಾಟ ಹಾಗೂ ಇತರೆ ಯಾವುದೇ ತರಹದ ಮದ್ಯ ವಹಿವಾಟು ನಿಷೇದಿಸಿದ್ದರೂ ಇಷ್ಟೊಂದು ಪ್ರಮಾಣದ ಮದ್ಯ ಹಾಗೂ ಬಿಯರ್ ಎಲ್ಲಿ ದೊರೆಯಿತು ಎಂದು ಕೇಳಲಾಗಿ ಆಸಾಮಿಯು ಯಾವುದಕ್ಕೂ ಉತ್ತರಿಸಿರುವುದಿಲ್ಲ.

ಈ ರೀತಿ ಅಕ್ರಮವಾಗಿ ಅದರಲ್ಲೂ ಒಣದಿನ ಆಚರಣೆ ಸಮಯದಲ್ಲಿ ಮದ್ಯವನ್ನು ಹೊಂದಿ ಸಾಗಾಣೆ ಮಾಡುವುದು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 10, 11, 14 ರ ರೀತ್ಯಾ ಅಪರಾಧವೆಂದು ತಿಳಿಸಿ ದೊರೆತ ಎಲ್ಲಾ ಮದ್ಯ ಹಾಗೂ ಬಿಯರ್ ಅನ್ನು ಸಾಗಾಣೆ ಮಾಡಲು ಬಳಕೆಯಾಗಿದ್ದ ಓಮ್ನಿ ಕಾರಿನೊಂದಿಗೆ ನಿಯಮಾನುಸಾರ ಕ್ರಮ ಜರುಗಿಸಿ ಜಪ್ತು ಪಡಿಸಿಕೊಳ್ಳಲಾಯಿತು.

ದೊರೆತ ಎಲ್ಲಾ ಮದ್ಯದ ಬ್ರಾಂನ ಒಟ್ಟು 18 ರಟ್ಟಿನ ಪೆಟ್ಟಿಗಳಿಂದ ತಲಾ ಎರಡೆರಡು ಟೆಟ್ರಾ ಪ್ಯಾಕುಗಳನ್ನು ಒಟ್ಟು 36 ಟೆಟ್ರಾ ಪ್ಯಾಕುಗಳು ಒಟ್ಟಾರೆ 6.48 ಲೀ. ಮದ್ಯವನ್ನು ಹಾಗೂ ದೊರೆತ 500 ಮಿಲೀ ಪ್ರಮಾಣದ ತಲಾ 24 ಟಿನ್ ಗಳುಳ್ಳ ಕಿಂಗ್ ಫಿಷರ್ ಸ್ಟ್ರಾಂಗ್ ಪ್ರೀಮಿಯರ್ ಬಿಯರ್ ನ ಒಟ್ಟು 4 ರಟ್ಟಿನ ಪೆಟ್ಟಿಗೆಗಳಿಂದ ತಲಾ ಎರಡೆರಡು ಟಿನ್ಗಳು ಒಟ್ಟು 08 ಟಿನ್ ಗಳು ಒಟ್ಟಾರೆ 4.000 ಲೀ ಬಿಯರ್ ರಾಸಾಯನಿಕ ವಿಶ್ಲೇಷಣೆಗಾಗಿ ಮಾದರಿ ತೆಗೆಯಲಾಯಿತು. ಅವುಗಳಿಗೆ ಪ್ರತ್ಯೇಕವಾದ ಎರಡು ಬಿಳಿ ಬಟ್ಟೆಯ ಚೀಲಗಳನ್ನು ತಯಾರಿಸಿಕೊಂಡು ಒಂದರಲ್ಲಿ ವಿವಿಧ ಬ್ರಾಂಡಿ ನ ರಾಸಾಯನಿಕ ವಿಶ್ಲೇಷಣೆಗೆ ಮಾದರಿ ತೆಗೆದ ಟೆಟ್ರಾ ಪ್ಯಾಕುಗಳನ್ನು ಹಾಕಿ ಅದರ ಮೂತಿಯನ್ನು ಸೂಜಿ-ದಾರದಿಂದ ಹೊಲಿದು ಅದಕ್ಕೆ ಮಾರ್ಕರ್ನಿಂದ **ಎ** ಎಂದು ಗುರುತಿಸಿ ಅರಗು ಹಚ್ಚಿ ಇಲಾಖಾ ಸೀಲಿನಿಂದ ಮೊಹರು ಮಾಡಲಾಯಿತು.

ಅದೇ ರೀತಿ ರಾಸಾಯನಿಕ ವಿಶ್ಲೇಷಣೆ ಮಾದರಿ ತೆಗೆದ ಎಲ್ಲಾ 8 ಬಿಯರ್ ಬಿನ್ ಗಳನ್ನು ಹಾಕಿ ಅದರ ಮೂತಿಯನ್ನು ಸೂಜಿ-ದಾರದಿಂದ ಹೊಲಿದು ಅದಕ್ಕೆ ಮಾರ್ಕರ್ನಿಂದ **ಬಿ** ಎಂದು ಗುರುತಿಸಿ ಅರಗು ಹಚ್ಚಿ ಇಲಾಖಾ ಸೀಲಿನಿಂದ ಮೊಹರು ಮಾಡಲಾಯಿತು. ಕಛೇರಿನ ಸೀಲಿನ ಸಂಖ್ಯೆ218 ಇರುತ್ತದೆ.

ನಂತರ 25 ಮಾದರಿ ಚೀಟಿಗಳನ್ನು ತಯಾರಿಸಿ ರಾಸಾಯನಿಕ ವಿಶ್ಲೇಷಣೆಗೆ ಮಾದರಿ ತೆಗೆದ ಮದ್ಯದ ಚೀಲದ ಮೇಲೆ ಹಾಗೂ ವಾಹನದ ಮೇಲೆ ಅಂಟಿಸಲಾಯಿತು. ನಂತರ ಉಳಿದ 22 ಮಾದರಿ ಚೀಟಿಗಳನ್ನು ಜಪ್ತು ಪಡಿಸಿಕೊಂಡು 18 ಮದ್ಯದ ರಟ್ಟಿನ ಪಟ್ಟಿಗಳು ಹಾಗೂ 4 ಬಿಯರ್ನ ರಟ್ಟಿನ ಪೆಟ್ಟಿಗೆ ಮೇಲೆ ಅಂಟಿಸಲಾಯಿತು.

ಸದರಿ ವಾಹನಕ್ಕೆ ಸಂಬಂಧಿಸಿದಂತೆ ಕಾಗದ ಪತ್ರಗಳು ಇರುವ ಬಗ್ಗೆ ಪರಿಶೀಲಿಸಿದಾಗ ವಾಹನದ ಡ್ಯಾಪ್ ಬೋರ್ಡ್ ನಲ್ಲಿ ಸದರಿ ವಾಹನಕ್ಕೆ ಸಂಬಂಧಿಸಿದ IBBCO Tokio General Insurance Company Limited ಗೆ ಸೇರಿದ ನಕಲು ಪ್ರತಿ ಇರುತ್ತದೆ. ಸದರಿ ವಾಹನದ ಎಂಜಿನ್ ಸಂಖ್ಯೆಯನ್ನು ಮತ್ತು ಚಾರ್ಚಿ ಸಂಖ್ಯೆಗಳನ್ನು ಸದರಿ ಇನ್ಸೂರೆನ್ಸ್ ಪಾಲಿಸಿಯೊಂದಿಗೆ ತಾಳೆ ನೋಡಲಾಗಿ ಸರಿಯಾಗಿರುತ್ತದೆ.

ಸದರಿ ಆರೋಪಿಯ ವಿವರವನ್ನು ಕೇಳಲಾಗಿ ಸಿಬ್ಬಂದಿಗಳು ಸಿ. ವೆಂಕಟೇಶ್ ಬಿನ್ ಲೇ. ಚಿನ್ನಪ್ಪ, ಮಾರುತಿ ನಗರ, ಹನೂರು ಟೌನ್ ಎಂದು ತಿಳಿಸಿರುತ್ತಾನೆ. ನಂತರ ಮುದ್ದೇಮಾಲು ಹಾಗೂ ಸ್ಯಾಂಪಲ್ ಬ್ಯಾಗುಗಳನ್ನು ಇಲಾಖಾ ವಶಕ್ಕೆ ಪಡೆದುಕೊಂಡು ಸದರಿ ವಾಹನವನ್ನು ಜಪ್ತುಪಡಿಸಿಕೊಂಡು ಆರೋಪಿಯನ್ನು ದಸ್ತಗಿರಿ ಮಾಡಲಾಯಿತು.

ಸಾಕ್ಷಿಗೆ ದಿನಾಂಕ 15.05.2018 ರ ಸ್ಥಳದಲ್ಲಿ ಬರೆದ ಮಹಜರ್ ಅನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ದಿನಾಂಕ 15.05.2018 ರ ಸ್ಥಳದಲ್ಲಿ ತಯಾರಿಸಿದ ಶೋಧನ ಸಮುಚ್ಚಿತ ಆಧಾರವನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ದಿನಾಂಕ 15.05.2018 ರ ಸ್ವ ವರದಿಯನ್ನು ಅನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯಕ್ಕೆ ಸಲ್ಲಿಸಿರುವ ಪಿ.ಎಫ್ ಅನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಅಬಕಾರಿ ಕಾಯ್ದೆ ಕಲಂ 43(ಎ) ರೀತ್ಯಾ ವಶಪಡಿಕೊಂಡಿರುವ ಪಟ್ಟಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಲಿಸ್ಟ್ ಆಫ್ ಆರ್ಟಿಕಲ್ಸ್ ಅನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-7 ಎಂದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಒಂದು ಬಿಳಿ ಬಟ್ಟೆ ಬ್ಯಾಗ್ನಲ್ಲಿ ಕಟ್ಟಿರುವ 8 ಬಿಯರ್ ಟಿನ್ (ಕ್ಯಾನ್)ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾರೆಯಾಗಿ ಮುದ್ದೇಮಾಲು-1 ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಒಂದು ಬಿಳಿ ಬಟ್ಟೆ ಬ್ಯಾಗ್ನಲ್ಲಿ ಕಟ್ಟಿರುವ 36 ರಾಸಾಯನಿಕ ಪರೀಕ್ಷೆಗಾಗಿ ತೆಗೆದುಕೊಂಡಿದ್ದ, ಒಟ್ಟು 16 ಒರಿಜಿನಲ್ ಚಾಯ್ಸ್ ಬ್ರಾಂಡಿ ಪ್ಯಾಕುಗಳು, 16 ತ್ರಿ ಏಸಿಸ್ ವಿಸ್ಕಿಯ ಪ್ಯಾಕುಗಳು, 4 ಓಲ್ಡ್ ಟವರಿನ್ ವಿಸ್ಕಿಯ ಪೌಚುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾರೆಯಾಗಿ ಮುದ್ದೇಮಾಲು- 2 ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯ ಮುಂದಿರುವ ಎರಡು ಬಿಳಿ ಬಟ್ಟೆ ಬ್ಯಾಗ್ ಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಮುದ್ದೇಮಾಲು-3 ಮತ್ತು 4 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲು : ಶ್ರೀ ಎನ್ ಪಿ ಆರೋಪಿ ಪರ ವಕೀಲರಿಂದ</u>

ಸಾರ್ವತ್ರಿಕ ವಿಧಾನ ಸಭಾ ಚುನಾವಣೆಯ ಹಿನ್ನೆಲೆಯಲ್ಲಿ 2018 ರಲ್ಲಿ ನನಗೆ ಕೊಳ್ಳೇಗಾಲ ವಲಯಕ್ಕೆ ಅಬಕಾರಿ ನಿರೀಕ್ಷಕರಾಗಿ ನಿಯೋಜನೆ ಮಾಡಿದ್ದರು. ನಮ್ಮ ಕೇಂದ್ರ ಸ್ಥಾನ ಕೊಳ್ಳೇಗಾಲ. ನಮಗೆ ಬಾತ್ಮೀದಾರರಿಂದ ಮಾಹಿತಿ ಬಂದಾಗ ಸುಮಾರು 10.30 ಗಂಟೆ ಸಮಯವಾಗಿತ್ತು.

ಬಾತ್ಮೀದಾರರಿಂದ ನಮಗೆ ಮಾಹಿತಿ ಬಂದಿತ್ತು ಎಂದು ನಿಪಿ-1 ರಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಸದರಿ ಮಾಹಿತಿ ಬಂದಾಗ ನಾವು ನಾಲಾರೋಡ್ ಬಳಿ ಗಸ್ತು ಕೆಲಸದಲ್ಲಿದ್ದೇವು. ನಾಲಾರೋಡ್ ನಿಂದ ಕೃತ್ಯ ನಡೆಯಿತು ಎನ್ನಲಾದ ಸ್ಥಳ ಕ್ಕೆ ಸುಮಾರು 20 ಕಿ. ಮೀ ಅಂತರವಿರುತ್ತದೆ.

ಸದರಿ ನಾಲಾರೋಡ್ ನಿಂದ ಘಟನಾ ಸ್ಥಳಕ್ಕೆ ಹೋಗುವ ರಸ್ತೆ ಹಳ್ಳದಿಣ್ಣೆಗಳಿಂದ ಕೂಡಿದ ಮಣ್ಣು ರಸ್ತೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ಅತ್ಯಂತ ವೇಗವಾಗಿ ವಾಹನ ಚಲಾಯಿಸಲು ಆಗುವುದಿಲ್ಲ ಎಂದರೆ ಸರಿ.

ನಾಲಾರೋಡ್ ನಿಂದ ಘಟನಾ ಸ್ಥಳಕ್ಕೆ ತಲುಪಲು ಸುಮಾರು 45 ನಿಮಿಷ ಬೇಕು. ಘಟನಾ ಸ್ಥಳಕ್ಕೆ ನಾವು ತಲುಪಿದಾಗ ಆರೋಪಿ ಸ್ಥಳದಲ್ಲೇ ಆರೋಪಿ ಕಾರಿನಲ್ಲಿ ಕುಳಿತುಕೊಂಡಿದ್ದ.

ಘಟನಾ ಸ್ಥಳ ಗ್ರಾಮದಿಂದ ಸುಮಾರು ಅರ್ಧ ಕಿ. ಮಿ ದೂರದಲ್ಲಿದ್ದು ಆ ಸಮಯದಲ್ಲಿ ಕೆಲವು ಸಾರ್ವಜನಿಕರು ಓಡಾಡುತ್ತಿದ್ದರು. ಸಾರ್ವಜನಿಕರರನ್ನು ಪಂಚರಾಗಿ ಸಹಕರಿಸುವಂತೆ ಕೋರಲಾಗಿ ಅವರು ನಿರಾಕರಿಸಿರುತ್ತಾರೆ. ಸದರಿ ಸಾರ್ವಜನಿಕರನ್ನು ನಾವು ಪಂಚರಾಗಿ ಸಹಕರಿಸುವಂತೆ ನಾವು ಕೇಳಿಲ್ಲ ಮತ್ತು ಕೇಳದೆ ಇದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಸುಮಾರು 15 ನಿಮಿಷಗಳ ಕಾಲ ಆರೋಪಿಯನ್ನು ವಿಚಾರಣೆ ಮಾಡಿರುತ್ತೇವೆ. ಆ ನಂತರ ಆರೋಪಿಗೆ ನಿಯಮಾನುಸಾರ ನೋಟಿಸು ನೀಡಿ ಮಹಜರ್ ಕ್ರಮ ಜರುಗಿಸಿರುತ್ತೇವೆ.

ನಿಪಿ-1 ಅನ್ನು ಬರೆಯಲು ತೆಗೆದುಕೊಂಡ ಅವಧಿಯನ್ನು ನಮೂದು ಮಾಡಿಲ್ಲ ಎಂದರೆ ಸರಿ. ನಿಪಿ-1 ರಲ್ಲಿ ಮಹಜರ್ ಕ್ರಮ ಜರುಗಿಸಿದ ಅಬಧಿಯನ್ನು ಮುಕ್ತಾಯಗೊಳಿಸಿದ ಸಮಯವನ್ನು ನಮೂದುವ ೊಡಲು ಏನಾದರು ತೊಂದರೆ ಇತ್ತೇ ಎಂದರೆ ಕೈ ತಪ್ಪಿನಿಂದ ಬರೆದಿರುವುದಿಲ್ಲ ಎಂದು ನುಡಿಯುತ್ತಾರೆ . ನಾವು ಘಟನಾ ಸ್ಥಳಕ್ಕೆ ಹೋಗಿಲ್ಲ, ನಿಪಿ-1 ಅನ್ನು ಕಛೇರಿಯಲ್ಲೇ ಕುರಿತು ಬರೆದಿರುತ್ತೇವೆ ಎಂದರೆ ಸರಿಯಲ್ಲ.

ಆರೋಪಿ ಈ ಪ್ರಕರಣಕ್ಕಿಂತ ಮುಂಚೆ ನನಗೆ ಪರಿಚಯವಿಲ್ಲ. ಘಟನಾ ಸ್ಥಳದ ಪಕ್ಕದದಲ್ಲಿ ಇರೂ ಹೂಗ್ಯಂ ಗ್ರಾಮದಲ್ಲಿ ಒಂದು ಮದ್ಯದ ಅಂಗಡಿ ಇದೆ ಎಂದರೆ ಸರಿ. ಸಾರ್ವತ್ರಿಕ ವಿಧಾನ ಸಭಾ ಚುನಾವಣೆಯ ಸಲುವಾಗಿ ನಮ್ಮ ಇಲಾಖಾ ಅಂಕಿ ಅಂಶಗಳಿಗೋಸ್ಕರ ಮೇಲಾಧಿಕಾರಿಗಳ ಆದೇಶದ ಮೇರೆಗೆ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

ಈ ಪ್ರಕರಣದ ಯಾವುದೇ ಘಟನೆಗಳು ನಡೆದಿಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ. ಆರೋಪಿಯನ್ನು ವಶಕ್ಕೆ ಪಡೆದಿಲ್ಲ ಮತ್ತು ಆರೋಪಿಯಿಂದ ಯಾವುದೇ ಮುದ್ದೇಮಾಲುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಮುದ್ದೇಮಾಲುಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನ್ಯಾಯಲಯದ ಮುಂದಿರುವ ಮುದ್ದೇಮಾಲುಗಳ ತರಹದ ಬಿಯರ್ ಮತ್ತು ಮದ್ಯದ ಪೌಚುಗಳು ಸಾಮಾನ್ಯವಾಗಿ ಎಲ್ಲಾ ಮದ್ಯದ ಅಂಗಡಿಯಲ್ಲಿ ದೊರೆಯುತ್ತದೆ ಎಂದರೆ ಸರಿ.

<u>ಮರು ವಿಚಾರಣೆಃ ಇಲ್ಲ.</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

(ರಘು. ಸಿ. ಜೆ )
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕೊಳ್ಳೇಗಾಲ